# ಪಾಠ 10

# ಶಿಲುಬೆಯು ಬಳಿಯಲ್ಲಿ ದೋಷಪರಿಹಾರ

**ಮೂಲ : ಬ್ರೂಸ್ ಎನ್ ಕ್ಯಾಮರಾನ್,     ಅನುವಾದ : ಪಾಸ್ಟರ್ ಚೆಲುವರಾಜು**

**ಪೀಠಿಕೆ:** – ನೀವು ಎಂದಾದರು ಗಂಭೀರವಾದ ಪಾಪಮಾಡುವುದರ ಬಗ್ಗೆ ಆಲೋಚಿಸಿ ನೋಡಿದ್ದೀರಾ? ಹಾಗೆ ನೀವು ಆಲೋಚನ ಮಾಡಿದ್ದರೆ, ಅದರಿಂದಾಗುವ ಪರಿಣಾಮಗಳನ್ನು ಕುರಿತು ಆಲೋಚನೆ ಮಾಡಿರುತ್ತೇರಾ, ಅಲ್ಲವೇ? ಪಾಪಮಾಡಿ ಅಥವಾ ತಪ್ಪು ಮಾಡಿ ಸಿಕ್ಕಿಹಾಕಿಕೊಂಡಿದ್ದು ಉಂಟೇ? ಆಗೆ ನೀವು ಅನುಭವಿಸಿದ ಶಿಕ್ಷೆ ಎಷ್ಟರಮಟ್ಟಿಗಿತ್ತು? ಒಂದು ಸಮಯ ನೀವು ತಪ್ಪು ಮಾಡಿ ಹಾಕಿಕೊಂಡಿಲ್ಲದ್ದಿರಬಹುದು. ಆದರೆ ಅದು ನಿಮ್ಮ ಮೇಲೆ ಉಂಟುಮಾಡಿತಿರುವ ಪರಿಣಾಮವೇನು? ನನ್ನೊಬ್ಬ ಸ್ನೇಹಿತ ಗಂಭೀರ ಪಾಪಪೊಂದನ್ನು ಕುರಿತು ಹೇಳಿದ್ದು ನನ್ನ ನೆನಪಿಗೆ ಬರುತ್ತದೆ : "ನಾನು ಪಾಪ ಮಾಡಿದರೆ, ದೇವರು ನನ್ನನ್ನು ಕ್ಷಮಿಸುತ್ತಾರೆ." ಪಾಪಕ್ಕೆ ಸಂಬಂಧ ಪಟ್ಟ ಹಾಗೆ ನಮ್ಮ ಮೊದಲ ಆದ್ಯತೆ, ನಮ್ಮ ಪಾಪ ನಮ್ಮ ಮೇಲೆ ಉಂಟುಮಾಡುವ ಪರಿಣಾಮವೇನು? ಎಂಬುದಾಗಿರಬೇಕು. ಈ ವಾರ ಪಾಪ ಯೇಸುಸ್ವಾಮಿಯವರ ಮೇಲೆ ಉಂಟುಮಾಡುವ ಪರಿಣಾಮವೇನು? ಎಂಬುದಾಗಿರಬೇಕು. ಈ ವಾರ ಪಾಪ ಯೇಸುಸ್ವಾಮಿಯವರ ಮೇಲೆ ಉಂಟುಮಾಡುವ ಪರಿಣಾಮವೇನು? ಎಂಬುದಾಗಿರಬೇಕು. ಈ ವಾರ ಪಾಪ ಯೇಸುಸ್ವಾಮಿವರ ಮೇಲೆ ಉಂಟು ಮಾಡಿದ ಪರಿಣಾಮಗಳನ್ನು ಕುರಿತು ಕಲಿಯೋಣ: ದೇವರು ನಮ್ಮ ಪಾಪಕ್ಕೆ ಬಹಳ ದೊಡ್ಡ ತೆತ್ತಿದ್ದಾರೆ.

## I. ಗೆತ್ಸೆಮನೆ

(ಅ) **ಮತ್ತಾಯ 26:1-2.** ಸರ್ಕಾರ ಕೊಡುವ ಶಿಕ್ಷೆಗಳಲ್ಲಿ ಶಿಲುಬೆಯ ಮರಣ ಅತ್ಯಂತ ಹೀನಾಯವಾದದ್ದು. ನಿನ್ನನ್ನು ಶಿಲುಬೆಗೆ ಹಾಕುತ್ತಾರೆ ಎಂಬುದನ್ನು, ಮೊದಲೇ ತಿಳಿದುಕೊಂಡಿರಲು ನೀವು ಬಯಸುವಿರಾ? ಏಕೆ ತಿಳಿದುಕೊಂಡಿರಲು ಬಯಸುವಿರಿ? ಅಥವಾ ಅದು ನನಗೆ ತಿಳಿದುಕೊಂಡಿರಲು ಬಯಸುವಿರಿ? ಅಥವಾ ಅದು ನನಗೆ ತಿಳಿಯದಿರಲೆಂದು ಏಕೆ ಆಶಿಸುತ್ತೀರಿ? [ನನ್ನ ತಾಯಿ, "ಇರು, ಇರು, ಅಪ್ಪ ಬಂದ ಮೇಲೆ ನಿನಗೆ ಒದೆ ಬೀಳುತ್ತದೆ" ಎಂದು ಹೇಳುತ್ತಿದ್ದದ್ದು ಜ್ಞಾಪಕಕ್ಕೆ ಬರುತ್ತಿದೆ." ಅದರ ಬಗ್ಗೆಯೇ ಯೋಚನೆ ಮಾಡುತ್ತಿದ್ದಾಗ, ಜೀವನ ಸುಖಮಯ ಎನಿಸುತ್ತಿರಲಿಲ್ಲ.]

(ಆ) **ಮತ್ತಾಯ 26:36-38ನ್ನು ಓದಿಕೊಳ್ಳಿರಿ.**
ಇಲ್ಲಿನ ಯೇಸುಸ್ವಾಮಿಯವರ ಮಾತುಗಳನ್ನು ತುಂಬಾ ಎಚ್ಚರವಾಗಿ ಗಮನಿಸಿರಿ. ಇಂದಿನ ಮಾತುಗಳಲ್ಲಿ ಹೇಳುವುದಾದರೆ, ಯೇಸುಸ್ವಾಮಿಯನ ಅಂದಿನ – ಮನೋನೆಲೆಯನ್ನು ಹೇಗೆ ವರ್ಣಿಸುವಿರಿ? [ಅವರು ದುಃಖಪೂರಿತರಾಗಿದ್ದರು ಮತ್ತು

ಮನಗುಂದಿದವರಾಗಿದ್ದರು. ಮನಸ್ಸು ತುಂಬಾ ನೊಂದಿತ್ತು. ಆಗ ಸಾವು ಮೇಲೆನಿಸಿತು. ಸಾಯುವುದರಲ್ಲಿ ಸಂತೋಷವಿತ್ತು?

(i) ತುಂಬಾ ದುಃಖವಾದಾಗ, ನಿಮಗೂ ಸತ್ತರೆ ಒಳ್ಳೆಯದು ಎನಿಸಿತ್ತೇ?

(ii) ಭವಿಷ್ಯ ಭಯವನ್ನೊಡ್ಡಿತು?

(iii) ಇಂಥಹ ಭಯ ದೇಹದ ನೋವು ತಾಳಲಾರದೆ ಬಂದಿತ್ತೇ? ಅಥವಾ ಸಾವಿನ ಸುಳಿವೇ ಭಯವಾಗಿತ್ತೇ? [ಶಾರೀರಿಕ ನೋವಿಗಿಂತ ಸಾವೇ ಮೇಲೂ ಎಂದು ನನಗನ್ನಿಸಬಹುದು. ಆದರೆ ಯೇಸುಸ್ವಾಮಿಗೆ ಹಾಗೆ ಅನ್ನಿಸಿರಲಿಲ್ಲ. ನಮ್ಮ ಪಾಪ ಭಾರವನ್ನೆಲ್ಲಾ ಅವರು ಹೊತ್ತಿದ್ದರು ಎಂಬುದನ್ನು ಜ್ಞಾಪಕಮಾಡಿಕೊಳ್ಳಿ. **(ಗಲಾತ್ಯ 3:13; 2 ಕೊರಿಂಥ 5:21)**. ಪಾಪರಹಿತ ದೇವರು ಇಡೀ ಮನುಕುಲದ – ಪಾಪಭಾರವನ್ನು ಅವರ ಸಲುವಾಗಿ ಹೊರುವಂತಾದ್ದನ್ನು ಸ್ವಲ್ಪ ಕಲ್ಪನೆ ಮಾಡಿ ನೋಡಿ.

(ಇ) **ಮತ್ತಾಯ 26:39ನ್ನು ಓದಿಕೊಳ್ಳಿ.** ಯೇಸುಸ್ವಾಮಿಗೆ ಇಲ್ಲಿ ಬೇಕಾಗಿರುವದೇನು? [ತಮಗೆ ಮುಂದೆ – ಏನಾಗುತ್ತದೋ ಅದು ತಡೆಹಿಡಿಯಲ್ಪಡಬೇಕಾಗಿತ್ತು. ದೇವರು ಇನ್ನೊಂದು ರಕ್ಷಣೆಯ ಯೋಜನೆ ಸಿದ್ಧಪಡಿಸಿರಬಾರದೇಕೆ ಎಂದುಕೊಂಡಿರಬೇಕು. ಆ ಮೂಲಕ ಮುಂದೆ ಬರಲಿರುವ ದೈಹಿಕ ಹಿಂಸೆ ಮತ್ತು ಹೆಚ್ಚುತ್ತಿರುವ ಮಾನವರ ಪಾಪಭಾರದಿಂದ ತಪ್ಪಿಸಿಕೊಳ್ಳಬಹುದು ಎಂದುಕೊಂಡಿರಲಿಕ್ಕೂ ಸಾಕು.]

1) ಯೇಸುಸ್ವಾಮಿ ಇದನ್ನು ತಪ್ಪಿಸಬಹುದಿತ್ತೇ? [ಹೌದು ‘‘ಸಾಧ್ಯವಾದರೆ ಈ ಪಾತ್ರೆಯು ನನ್ನನ್ನು ಬಿಟ್ಟು ಹೋಗಲಿ’’ ಎಂಬ ಮಾತನ್ನು ಗಮಿನಿಸಿರಿ. ಯೇಸುಸ್ವಾಮಿಯವರು ಈ ಪಾತ್ರೆಯಲ್ಲಿರುವುದನ್ನು ಕುಡಿಯಬೇಕಾಗಿರಲಿಲ್ಲ. ಅವರ ಪಾಡಿಗೆ ಅವರು ಪರಲೋಕಕ್ಕೆ ಏರಿ ಹೋಗಬಹುದಾಗಿತ್ತು. ಸ್ವಲ್ಪ ಸಮಯ ‘‘ಸುಧಾರಿಸಿಕೊಳ್ಳಬಹುದಾಗಿತು’’ ‘‘ನಾನು ಈ ಜನಗಳನ್ನು ಅತ್ಯಂತ ಸಮೀಪ ದೂರದಿಂದ ಕಂಡಿದ್ದೇನೆ, ವೈಯಕ್ತಿಕವಾಗಿ ಒಡನಾಡಿದ್ದೇನೆ. ಇವರಲ್ಲಿ ಯಾರೂ ರಕ್ಷಣೆಗೆ ಅರ್ಹರಲ್ಲ’’ ಎಂದು ಅನ್ನಿಸಿರಬಹುದು.’’]

2) ನಾವು ಯಾವಾಗಳು ಪ್ರಾರ್ಥಿಸುವ ಹಾಗೆ, ಯೇಸುಸ್ವಾಮಿ ನಮಗಾಗಿ ಏನೆಂದು ಪ್ರಾರ್ಥನೆ ಮಾಡಿದರು.
[ದೇವರ ಚಿತ್ತವೇ ನೆರವೇರಲಿ ಎಂದು ಹೇಳಿದರು.]

(i) ಅಂದರೆ ಏನೋ ಭಯಂಕರ ಘಟನೆಗಳು ಮುಂದೆ ನಡೆಯಲಿದೆಯೆಂದೇ ಇದರ ಅರ್ಥವೇ? [ಹೌದು]

(ಈ) **ಮತ್ತಾಯ 26:40-41ನ್ನು ಓದಿಕೊಳ್ಳಿ.** ನೀವು ತುಂಬಾ ಕಷ್ಟ-ನಷ್ಟ, ನೋವು-ದುಃಖಕ್ಕೆ ಒಳಗಾದಾಗ, ನಿಮ್ಮ ಸ್ನೇಹಿತರ್ಯಾರು ನಿಮ್ಮ ಬಗ್ಗೆ ಕಾಳಜಿ ವಹಿಸಲಿಲ್ಲವೇ? ಅವರುಗಳು ಅವರ ಕ್ಷೇಮವನ್ನು ನೋಡಿಕೊಂಡರೇ ಹೊರತು, ನಿಮಗೇನು ಬೇಕು ಎಂದು ಕೇಳಲೂ ಇಲ್ಲ ಅಲ್ಲವೆ?

(ಉ) **ಮತ್ತಾಯ 26:42ನ್ನು ಓದಿಕೊಳ್ಳಿ.** ಯೇಸುಸ್ವಾಮಿ ಮತ್ತೊಂದು ದಾರಿಯಿದೆಯೇ ಎಂದು ನೋಡುತ್ತಿದ್ದಾರೆಯೇ? ಅವರ ಮಾನವ ಸ್ವಭಾವವನ್ನು ಕುರಿತು ಇದು ಹೇಳುವುದೇನು? [ಬರಬಹುದಾದ ಕಷ್ಟದಿಂದ ತಪ್ಪಿಸಿಕೊಳ್ಳಬಯಸುವ ಮನಸ್ಸು ಮಾನವ ಸ್ವಭಾವವನ್ನು ತೋರಿದರೂ, ಕೊನೆಗೆ ಅವರು ದೇವರ ಚಿತ್ತದಂತೆಯೇ ಎಲ್ಲಾ ನಡೆಯಲಿ ಎನ್ನುವುದರಲ್ಲಿ ದೈವತ್ವವನ್ನು ಕಾಣಬಹುದು.]

(ಊ) ಯೇಸುಸ್ವಾಮಿ ಮತ್ತೆ ಪೇತ್ರ, ಯೋಹಾನ ಮತ್ತು ಯಾಕೋಬರ ಬಳಿ ಬಂದಿದ್ದಾರೆ ಅವರುಗಳು ಯೇಸುವಿನ ಮನವಿಯನ್ನು ಮೀರಿ ಮಲಗಿ ನಿದ್ರಿಸುತ್ತಿದ್ದಾರೆ. ಶಸ್ತ್ರಧಾರಿ ಗುಂಪೊಂದು ಯೇಸುಸ್ವಾಮಿಯನ್ನು ಸೆರೆಯಿಡಿಯಲು ಸಜ್ಜಾಗಿ ಗೆತ್ಸೆಮನೆ ತೋಟಕ್ಕೆ ಬಂದಿದೆ. ಅವರ ಮುಂದಾಳತ್ವವನ್ನು ಯೂದ ವಹಿಸಿದ್ದಾನೆ. ಇಸ್ಕಾರಿಯತ್ ಯೂದ ಇದನ್ನು ಮಾಡಿದ್ದೇಕೆ? [ಎರಡೇ ಎರಡು ಕಾರಣಗಳೂ ಸೂಕ್ತ ಉತ್ತರ ಕೊಡುತ್ತವೆ:

1) ಯೇಸುಸ್ವಾಮಿ ಕ್ರಿಸ್ತನಲ್ಲ ಎಂಬ ತೀರ್ಮಾನಕ್ಕೆ ಯೂದ ಬಂದಿದ್ದಾನೆ ಅಥವಾ

2) ಯೇಸುಸ್ವಾಮಿಗೆ ತನ್ನ ರಾಜ್ಯವನ್ನು ಘೋಷಿಸಲು ಸ್ವಲ್ಪ ಒತ್ತಡ ಹೇರಬೇಕು ಎಂದು ಆತನಿಗೆ ಅನಿಸಿರಲಿಕ್ಕೂ ಸಾಕು. ಯೇಸುಸ್ವಾಮಿಯವರ ಸುತ್ತ ಅವರ ಸ್ನೇಹಿತರುಗಳಿದ್ದಾರೆ. ಆದರೆ ಅವರುಗಳು ಯಾವ ರೀತಿಯ ಸಹಾಯಮಾಡುತ್ತಿಲ್ಲ, ಆತನಲ್ಲಿ ಅವರಿಗೆ ನಂಬಿಕೆಯೂ ಇಲ್ಲ ಅಥವಾ ತಾವು ಆತನಿಗಿಂತ ಬುದ್ಧಿವಂತರು ಎಂದು ನೆನೆಸಿರಲಿಕ್ಕೂ ಸಾಕು. ಎಂಥಹ ದುಃಖನೀಯ ಚಿತ್ರಣ.]

(ಋ) **ಮತ್ತಾಯ 26:50-53ನ್ನು ಓದಿಕೊಳ್ಳಿ.** ಯೇಸುಸ್ವಾಮಿ ಹನ್ನೆರೆಡು ಗಣಗಳಿಗಿಂತ ಹೆಚ್ಚಿನ ದೇವದೂತರ ಸಹಾಯದ ಪ್ರಸ್ತಾಪ ಮಾಡಿದ್ದೇಕೆ? [ಯೇಸುಸ್ವಾಮಿ ಮುಂದೆ ಬರಲಿರುವುದನ್ನೆಲ್ಲಾ ಅನುಭವಿಸಲಿಕ್ಕೆ ತಾವಾಗಿಯೇ ಮುಂದೆ ಬಂದಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ.]

(1) ಯೇಸುಸ್ವಾಮಿ ಬಯಸಿದ್ದಾರೆ ಒಂದು ನೂರು ಗಣ ದೇವದೂತರುಗಳು ಬಂದಿಳಿಯುತ್ತಿದ್ದರು ಹೀಗಿರುವಾಗ ಅವರು ಹನ್ನೆರಡು ಗಣದ ಮಾತ್ರಕ್ಕೆ ದೇವದೂತರ ಸಂಖ್ಯೆಯನ್ನು ಸೀಮಿತಗೊಳಿಸಿದ್ದೇಕೆ? [ಯೇಸುಸ್ವಾಮಿಯವರಿಗೆ ಹನ್ನೆರೆಡು ಮಂದಿ ಶಿಷ್ಯರಿದ್ದರು. ಅವರಲ್ಲಿ ಒಬ್ಬನು ಕತ್ತಿಹಿಡಿದು ಕಾಳಗಕ್ಕೆ ಮುಂದಾದನು. ಯೇಸುಸ್ವಾಮಿ ಒಬ್ಬೊಬ್ಬ ಶಿಷ್ಯನಿಗೂ 6,000 ದೇವದೂತ ಗಣ ಒದಗಿಸಬಲ್ಲವರಾಗಿದ್ದರು. ಅವರ ಸಹಾಯಕ್ಕೆ ಆ ಅಸಹಾಯಕ ಶಿಷ್ಯರುಗಳಿಗಿಂತ, ಆಕಾಶದಿಂದ ಬೆಂಕಿ ತರಿಸುವಷ್ಟು ಶಕ್ತಿ ಅವರಿಗಿತ್ತು.]

(ಎ) ಶತ್ರುಗುಂಪು ಹತ್ತಿರ ಬರುತ್ತಿದ್ದಂತೆ, ಮೊದಲು ನಿದ್ರಿಸುತ್ತಿದ್ದು, ಈಗ ಎಚ್ಚರಗೊಂಡಿದ್ದ, ಪೇತ್ರ; ತನ್ನ ಕತ್ತಿ ಹಿಡಿದು, "ನಾನು ನಿನ್ನ ಸಂಗಡ ಸಾಯಬೇಕಾದರೂ ..........." ಎಂಬ ಮಾತುಗಳನ್ನು **[ಮತ್ತಾಯ 26:33-35]** ನಿಜಮಾಡಲು ಹೊರಟಿದ್ದನು. ಪೇತ್ರ ಯೇಸುಸ್ವಾಮಿಗೆ ಪ್ರಾಮಾಣಿಕವಾಗಿ ನಡೆದುಕೊಂಡನೇ ಅಥವಾ ಇಲ್ಲವೇ? ನಮಗಾಗಿ ಪ್ರಾರ್ಥನೆ ಮಾಡುತ್ತೇವೆ ಎಂದು ಹೇಳುವ ಜನ, ನಮಗೆ ನಿಜವಾಗಿ ಬೇಕಾದ ಸಹಾಯಮಾಡಲು ಶಕ್ತರಾಗಿದ್ದರು, ಸಹಾಯಮಾಡಲು ಮುಂದೆಬಾರದೆ, ನಿನಗೆ ಪ್ರಾರ್ಥನೆ ಮಾಡುತ್ತೇನೆ ಎಂದಷ್ಟೇ ಹೇಳಿದಾಗ ನಾವು ಅವರನ್ನು ಕಂಡು ನಗುತ್ತೇವೆ, ಅಲ್ಲವೇ? [**ಎಫೆಸ 6:12ನ್ನು ಓದಿಕೊಳ್ಳಿ**. ಭೂಲೋಕದ ಅಂತ್ಯಗತಿಯ ವಿಷಯದಲ್ಲಿ ಯೇಸುಸ್ವಾಮಿ ತುಂಬಾ ಅಹಿತಕರವಾದ ಆಧ್ಯಾತ್ಮಿಕ ಹೋರಾಟ ನಡೆಸಿದ್ದಾರೆ. ಪೇತ್ರನಿಗೆ ಈ ಹೋರಾಟ ಅಂಧಕಾರದಲ್ಲಿರುವ ದುರಾತ್ಮಗಳ ವಿರುದ್ಧವೇ ವಿನಹ ಮಾನವರೊಂದಿಗಲ್ಲ ಎಂಬುದು ಅರ್ಥವಾಗಿಲಿಲ್ಲ. ಪೇತ್ರ ಆಧ್ಯಾತ್ಮಿಕ ಹೋರಾಟ ನಡೆಸದೇ ಹೋದದ್ದು, ಯೇಸುಸ್ವಾಮಿಗೆ ಸೋಲನ್ನುಂಟುಮಾಡಿಬಿಡುತ್ತಿತ್ತು. ಆದರೆ ಆ ಹೋರಾಟವನ್ನು ಯೇಸುಸ್ವಾಮಿ ಕೈಗೆತ್ತಿಕೊಂಡರು.]

(1) ಯಾವಾಗ ನಮ್ಮ ಒರೆಯಿಂದ ಕತ್ತಿಯನ್ನು ಹೊರತೆಗೆಯಬೇಕು ಮತ್ತು ಯಾವಾಗ ಪ್ರಾರ್ಥನೆ ಮಾಡಬೇಕು ಎಂಬುದು ನಮಗೆ ಗೋತ್ತಾಗುವದು ಹೇಗೆ?

(ಏ) **ಮತ್ತಾಯ 26: 54ನ್ನು ಓದಿಕೊಳ್ಳಿ**. ತಮ್ಮ ಮಗ ದೈಹಿಕವಾಗಿ ಜಜ್ಜಲ್ಪಟ್ಟು, ಶಿಲುಬೆಗೆ ಹಾಕಲ್ಪಡಬೇಕೆಂಬುದು ನಿಜವಾಗಿಯೂ ದೇವರ ಚಿತ್ತವಾಗಿತ್ತೇ? ಯೇಸುಸ್ವಾಮಿ ಸಹ, "ಪರಲೋಕದಲ್ಲಿರುವ ನನ್ನ ತಂದೆ ಪ್ರತೀಸ್ವರೂಪನಾದ ದೇವರು, ನಾನು ಹಿಂಸೆಗೊಳಗಾಗಿ ಕೊಲ್ಲಲ್ಪಡಬೇಕೆಂಬುದು ಅವರ ಚಿತ್ತವಾಗಿರಲಿಕ್ಕಿಲ್ಲ" ಎಂದು ಸಕಾರಣವಾಗಿ ಮಾತನಾಡಿದವರಲ್ಲಿ. [ಕಳೆದ ಮೂರು ವಾರಗಳ ಪಾಠಗಳಲ್ಲಿ, ಯೇಸುಸ್ವಾಮಿ ಹೇಗೆ ನಮಗಾಗಿ ಕೊಲ್ಲಲ್ಪಡುತ್ತಾರೆ ಎಂಬುದನ್ನು ಗುಡಾರ ಸೇವೆಯ ಮೂಲಕ ಅರ್ಥಮಾಡಿಕೊಂಡ ನಮ್ಮ ಮುಂದೆ, ಅದರ "ಬೃಹತ್ ಚಿತ್ರಣ" ಮೂಡಿ ನಿಂತಿದೆ. ನಮಗೆ ಕೆಟ್ಟದಾದಗಲೂ ಅಷ್ಟೇ, ದೇವರು ನಮ್ಮ ಬಗ್ಗೆ "ದೊಡ್ಡ ಚಿತ್ರ" ಬಿಡಿಸಿದ್ದಾರೆ ಎಂದು ತಿಳಿದು, ಅವರಲ್ಲಿ ಪರಿಪೂರ್ಣ ನಂಬಿಕೆ ಬೆಳೆಯಿಸಿಕೊಳ್ಳಬೇಕು.

## II. ಅವಮಾನ

(ಅ) **ಮತ್ತಾಯ 26:55-56ನ್ನು ಓದಿಕೊಳ್ಳಿ**. ಯಾವ ರೀತಿಯಾಗಿ ತನ್ನನ್ನು ಸೆರೆಹಿಡಿದು ಎಂಬುದರ ಬಗ್ಗೆ ಯೇಸುಸ್ವಾಮಿ ತಲೆಕೆಡಿಸಿಕೊಳ್ಳಬೇಕಿತ್ತೇ? [ಇದು ಅವಮಾನ ಮಾಡುವುದರ ಪ್ರಾರಂಭವಷ್ಟೇ. ಆದರೆ ಸೆರೆಹಿಡಿಯುವ ಮುನ್ನ ಅವರು ಗೌರ್‍ವಾನಿತ ಶಿಕ್ಷಕರಾಗಿದ್ದರೆ ವಿನಹ ಅಪಾಯಕಾರಿ ಕಳ್ಳ ಅಥವಾ ತಲೆತಪ್ಪಿಸಿಕೊಂಡ ಅಪರಾಧಿಯಾಗಿರಲಿಲ್ಲ.]

(1) ನಾವು ಸಾಯಬೇಕಾದರು ನಿನ್ನನ್ನು ತೊರೆಯುವುದಿಲ್ಲ ಎನ್ನು ಶಿಷ್ಯರ

ವಾಗ್ದಾನ (**ಮತ್ತಾಯ 26: 55-56**) ಏನಾಯಿತು?

(2) ಫಲಿತಾಂಶವೇನು? [ಯೇಸುಸ್ವಾಮಿ ಒಬ್ಬರೇ ಆ ಭಯಂಕರ ಹೋರಾಟವನ್ನು ಎದುರಿಸಿ ನಿಂತರು.]

(ಆ) **ಮತ್ತಾಯ 26:63 ಮತ್ತು 27:37ನ್ನು ಓದಿಕೊಳ್ಳಿ.** ಯೇಸುಸ್ವಾಮಿಯ ವಿರುದ್ಧ ಹೊರಿಸಲಾದ ಅಧಿಕಾರಿಗಳ ಆಪಾದನೆ ಏನು? [ಮೆಸ್ಸೀಯ, ಯಹೂದಿಗಳ ರಾಜ, ದೇವರ ಮಗ.]

(ಇ) **ಮತ್ತಾಯ 26:64ನ್ನು ಓದಿಕೊಳ್ಳಿ.** ನಿಮ್ಮನ್ನು ಯೇಸುಸ್ವಾಮಿಯ ಸ್ಥಾನದಲ್ಲಿ ಕಲ್ಪನೆಮಾಡಿ ನೋಡಿ. ಸಮಾಜದಲ್ಲಿ ದೊಡ್ಡ ಸ್ಥಾನಮಾನವುಳ್ಳ ಒಬ್ಬ ಮನುಷ್ಯನಾದ, ಮಹಾಯಾಜಕ ಎನಿಸಿಕೊಂಡವನು ಮೆಸ್ಸೀಯನು ಎಂದು ಹೇಳಿದ ಮಾತ್ರಕ್ಕೆ ನಿಮ್ಮನ್ನು - ಸಾರ್ವಜನಿಕವಾಗಿ ಸುಳ್ಳುಗಾರ ಎಂದು ಜರಿಯುತ್ತಾರೆ. ಇಂಥಹ ಸಂದರ್ಭದಲ್ಲಿ ನಿಮ್ಮ ಪ್ರತಿಕ್ರಿಯೆ ಏನು?

(ಈ) **ಮತ್ತಾಯ 26:66-68ನ್ನು ಓದಿಕೊಳ್ಳಿ.** ಯೇಸುಸ್ವಾಮಿ ತಮ್ಮನ್ನು ದೇವರು ಎಂದು ಹೇಳಿಕೊಂಡದ್ದಕ್ಕೆ ಆ ಜನಸ್ತೋಮ ಅವರ ಜೊತೆ ಹೇಗೆ ನಡೆದುಕೊಂಡಿತ್ತು? [ಮುಖದ ಮೇಲೆ ಉಗುಳಿದರು; ಗುದ್ದಿದರು; ಕೆನ್ನೆಗೆ ಏಟು ಹಾಕಿದರು.]

(1) ‘‘ನಿನ್ನನ್ನು ಹೊಡೆದವರಾರು?’’ ಎಂಬ ಪ್ರಶ್ನೆಯಲ್ಲಿರುವ ಮುಖ್ಯಾಂಶವೇನು? [ಆತನು ತನ್ನನ್ನು ದೇವರು ಎಂದು ಕರೆದುಕೊಂಡದ್ದನ್ನು ಹಾಸ್ಯ ಮಾಡುತ್ತಿದ್ದಾರೆ.]

(2) ನೀವು ಜೀವನದಲ್ಲಿ ಮಹತ್ವವಾದದ್ದನ್ನು ಸಾಧಿಸಿ, ಗೌರವಕ್ಕೆ ಅರ್ಹರಾದ ವ್ಯಕ್ತಿಯಾಗಿರುವಾಗ, ನಿಮ್ಮ ಸಾಧನೆಯನ್ನೆಲ್ಲಾ ಅಲ್ಲಗೆಳೆದು, ನಿಮ್ಮನ್ನು ತುಂಬಾ ಕೆಟ್ಟವನು ಎಂದು ಜನ ಹೇಳಲಾರಂಭಿಸಿದರೆ, ಅಂಥಹ ಜನರ ಜೊತೆ ನೀವು ಹೇಗೆ ನಡೆದುಕೊಳ್ಳುತ್ತೀರಿ?

(ಉ) **ಮತ್ತಾಯ 27:27-29ನ್ನು ಓದಿಕೊಳ್ಳಿ.** ನಿಮ್ಮನ್ನು ಅಪಹಾಸ್ಯ ಮಾಡುವವರ ಮುಂದೆ ಬೆತ್ತಲೆಯಾಗಿ ನಿಲ್ಲುವುದನ್ನು ಕಲ್ಪಿಸಿಕೊಳ್ಳಿ. ನಿಲುವಂಗಿ, ಕಿರೀಟ ಮತ್ತು ಬೆತ್ತವನ್ನು ಯೇಸುಸ್ವಾಮಿಯವರಿಗೆ ಕೊಡುವುದರ ಹಿಂದಿನ ಉದ್ದೇಶವೇನು? [ಯೇಸುಸ್ವಾಮಿ ತಾನು ದೇವರು ಎಂದು ಹೇಳಿಕೊಳ್ಳುವುದನ್ನು ಅಪಹಾಸ್ಯಕ್ಕೆ ಗುರಿಮಾಡುವುದು ಅವರ ಉದ್ದೇಶವಾಗಿತ್ತು.]

(ಊ) **ಮತ್ತಾಯ 27:30-31ನ್ನು ಓದಿಕೊಳ್ಳಿ.** ನಿಮ್ಮ ತಲೆಯ ಮೇಲೆ ಯಾರಾದರೂ ಹೊಡೆದರೆ ನೀವು ಸುಮ್ಮನಿರುವಿರಾ? ನಿಮ್ಮ ತಲೆಯ ಮೇಲೆ ಮುಳ್ಳಿನ ಕಿರೀಟ ಹಾಕಿ, ಅದರ ಮೇಲೆ ಬೆತ್ತದಿಂದ ಹೊಡೆಯುತ್ತಿರುವುದನ್ನು ಕಲ್ಪನೆಮಾಡಿನೋಡಿ.

(ಖ) ಈ ಎಲ್ಲಾ ಕ್ರೂರಕೃತ್ಯಗಳಿಂದ ಅವರು ಮನಸ್ಸು ಪಡುವ ಯಾತನೆಯನ್ನು ನೆನೆಸಿನೋಡಿ. ಹೀಗೆಲ್ಲಾ ನಡೆದುಕೊಳ್ಳುವಂತೆ ಅವರನ್ನು ಪ್ರೇರೇಪಿಸುದವನೇ: ಸೈತಾನ. ಯೇಸುಸ್ವಾಮಿ ಯಾರು ಎಂಬುದರ ಬಗ್ಗೆ ಸೈತಾನನಿಗೆ ಸಂಶಯಗಳಿವೆಯೇ? [ಇಲ್ಲವೇ ಇಲ್ಲ.]

(1) ಹಾಗಾದರೆ, ಇಲ್ಲಿನ ಇಂಗಿತವೇನು? [ಸೈತಾನ ಯೇಸುಸ್ವಾಮಿಯವರನ್ನು ಅರಣ್ಯದಲ್ಲಿ ಶೋಧನೆ ಮಾಡಿದ್ದನ್ನು ಕುರಿತು ಎರಡು ವಾರಗಳ ಹಿಂದೆ ತಾನೇ ಓದಿದೆವು **(ಪಾಠ 8)**. ಸೈತಾನ, ಯೇಸುಸ್ವಾಮಿಯರಿಗೆ ಒಡ್ಡಿದ ಮೊದಲ ಶೋಧನೆಯನ್ನು ಕುರಿತು ಚರ್ಚಿಸಿದ್ದೇವೆ. ಇಲ್ಲಿನ ಅಹಂಭಾವಗಳೇನು ಮತ್ತು ದೇವರಲ್ಲಿ ಇಡಬೇಕಾದ ಭರವಸೆಗಳನ್ನು ಕುರಿತು ಮಾತನಾಡಿದ್ದೇವೆ. ಇದೇ ರೀತಿಯಾದ ಶೋಧನೆಯನ್ನು ಹವ್ವಳಿಗೆ ಸೈತಾನ ಒಡ್ಡಿದ್ದನ್ನು ಜ್ಞಾಪಕಮಾಡಿಕೊಳ್ಳಿ. ಇಷ್ಟೆಲ್ಲಾ ಶೋಧನೆಗಳಲ್ಲಿ ತುಂಬಾ ಅವಮಾನ ಮಾಡುವಂಥದ್ದು ಎಂದರೆ : ''ನೀನು ದೇವರ ಮಗನಾಗಿದ್ದರೆ'' ಎಂಬುದು.

(2) ಯೇಸುಸ್ವಾಮಿಗೆ ಇದೊಂದು ಶೋಧನೆ ಅಥವಾ ತಾನು ದೇವರು ಎಂದು ಸಿದ್ಧಾಂತ ಮಾಡುವದು ಪಾಪ ಎಂದು ಅನ್ನಿಸಿಕೊಳ್ಳುವದು ಹೇಗೆ? [ಯೇಸುಸ್ವಾಮಿ ತಮ್ಮ ಸ್ವಂತ ಶಕ್ತಿಯಿಂದ ಸತ್ಯವನ್ನು ಸಿದ್ದಾಂತಮಾಡಿ ತೋರಿಸಬಹುದಾಗಿತ್ತು. ಹಾಗೆ ಮಾಡಿದ್ದರೆ ದೇವರ ಮೇಲೆ ಭರವಸೆಯಿಡುವ ವಿಷಯದಲ್ಲಿ ಖಂಡಿತ ಸೋಲನ್ನು ಅನುಭವಿಸುತ್ತಿದ್ದರು.]

(3) ಪಾಪದೊಂದಿಗೆ ಹೋರಾಟ ಮಾಡುವಾಗ ನಿಮ್ಮ ಭಾವನೆ ಹೇಗಿತ್ತು? ಸೋಲಿನ ಅನುಭವ ಹೇಗಿತ್ತು? ಇಡೀ ಮಾನವ ಕುಲದ ಪಾಪದ ಅಸಹ್ಯ ಹಾಗೂ ಅದೇ ಸಮಯದಲ್ಲಿ ಆ ಪಾಪವಿಮೋಚನೆಗಾಗಿ ನೀವು ಮಾಡುತ್ತಿರುವ ನಿಜ ತ್ಯಾಗಬಲಿಯ ನಿರಾಕರಣೆ ಮತ್ತು ಅದನ್ನು ಕುಚೋದ್ಯಮಾಡಿ ಜನ ನಗುವಾಗ ನಿಮಗಾಗುವ ನೋವನ್ನು ಕಲ್ಪನೆ ಮಾಡಿ ನೋಡಿರಿ.

(4) ನಿಮಗೆ ಅವಮಾನ ಆಗಲೇ ಬೇಕಾಗಿತ್ತು, ನೀವು ಅಂದುಕೊಂಡ ಹಾಗೆ ಆಗಿಹೋಯಿತು ಎಂಬುದನ್ನು ಮರೆಯಿರಿ. ಆದರೆ ನೀವು ಎದುರುನೋಡಿದ್ದ ಅವಮಾನವೊಂದು ಎದುರಾದಾಗ, ಅದನ್ನು ಎದುರಿಸಿ ನಿಲ್ಲುವುದೇ ಸರಿ ಎಂದು ನಿಮಗನ್ನಿಸಿದುಂಟೇ?

(ಎ) ಯೇಸುಸ್ವಾಮಿಯನ್ನು ಶಿಲುಬೆಗೆ ಜಡಿದಿದ್ದಾರೆ. ಶಿಲುಬೆಯ ಕಂಬವನ್ನು ನೆಲದೊಳಗೆ ಊಳುವಾಗ ತುಂಬಾ ಒರಟಾಗಿ ನಡೆದುಕೊಂಡಿದ್ದಾರೆ. **ಮತ್ತಾಯ 27:39-43ನ್ನು ಓದಿಕೊಳ್ಳಿ**. ''ದೇವರು ಅವನಲ್ಲಿ ಇಷ್ಟಪಟ್ಟರೆ ಈಗ ಅವನನ್ನು ಬಿಡಿಸಲಿ'' ಎನ್ನುತ್ತಿದ್ದರು ಮಹಾಯಾಜಕರೂ ಶಾಸ್ತ್ರಿಗಳೂ ಮತ್ತು ಹಿರಿಯರು. ಮನುಕುಲದ ಪಾಪಭಾರವನ್ನು ಹೊತ್ತು ಹಿಂಸೆಗೊಳಗಾಗಿದ್ದ ಯೇಸುಸ್ವಾಮಿಗೆ, ದೇವರು ತನ್ನನ್ನು ಇಷ್ಟಪಡುತ್ತಾರೆ ಎಂದು ಗೊತ್ತಿತ್ತೇ? ದೇವರಲ್ಲಿ ನಂಬಿಕೆ ಕುಂದಿಹೋಗುವ ಸಂಭವ ಬಲಗೊಂಡಿತೇ? **(ಮತ್ತಾಯ**

**27:46ನ್ನು ಓದಿರಿ.** ದೇವರು ಆತನನ್ನು ಕೈಬಿಟ್ಟಿದ್ದಾನೇನೂ ಎಂದೆನಿಸುತ್ತಿದೆ. ಇಷ್ಟೆಲ್ಲಾ ಆದರೂ ಯೇಸುಸ್ವಾಮಿ ತಮ್ಮಲ್ಲಿದ್ದ ಸ್ವಂತ ಶಕ್ತಿಯ ಪ್ರಯೋಗ ಮಾಡಲೇ ಇಲ್ಲ. ಒಂದಂಶ ಗಮನಿಸಿ: ಇದು ಸತ್ಯವೇದಲ್ಲಿರುವ ಸತ್ಯವನ್ನು ಎತ್ತಿ ತೋರಿಸುತ್ತವೆ. ಆದಿಯಿಂದ ಅಂತ್ಯದವರೆಗೆ ಸೈತಾನ ನಮಗೆ ಕಲಿಸಿಕೊಡುವುದು ಏನೆಂದರೆ : ದೇವರಲ್ಲಿ ಭರವಸೆ ಇಡಬೇಡಿರಿ. ಒಬ್ಬ ಮನುಷ್ಯ ಕರುಣಾಜನಕ ಕಥೆ ಬರೆಯುತ್ತಿದ್ದರೆ, ಆತ ಯೇಸುಸ್ವಾಮಿ ಅನುಭವಿಸಿದ ದೈಹಿಕ ನೋವುಗಳತ್ತ ಮಾತ್ರ ತನ್ನ ಗಮನ ಹರಿಸುತ್ತಿದ್ದ.)

(ಏ) **ಯೋಹಾನ 19:30ನ್ನು ಓದಿಕೊಳ್ಳಿ.** "ತೀರಿತು" ಯಾವುದು? [ಹೋರಾಟ ಯೇಸುಸ್ವಾಮಿ ಎರಡನೇ ಆದಾಮನಾಗಿ ಬಂದಿದ್ದರು. ಪರಿಪೂರ್ಣ ಜೀವನ ನಡೆಯಿಸಿದ್ದರು. ನಮ್ಮ ಪಾಪಗಳಿಗಾಗಿ ಮಡಿದರು. ನಾವು ಆತನ್ನೊಂದಿಗೆ ಮಡಿದೆವು. ಆತನು ಪುನರುತ್ಥಾನಗೊಂಡಾಗ ಸೈತಾನ ಮತ್ತು ಆತನ ದೆವ್ವಗಳೆಂಬ ಸಂಗಡಿಗರು ಸಂಪೂರ್ಣವಾಗಿ ಸೋತುಹೋದರು.]

(ಐ) ಸ್ನೇಹಿತನೇ, ನೀನು ಪಾಪಮಾಡಬೇಕೆಂದು ಆಮಿಷಕ್ಕೆ ಒಳಗಾದಾಗ, ನಮ್ಮ ಪಾಪದ ದಶೆಯಿಂದ ಯೇಸುಸ್ವಾಮಿ ಅನುಭವಿಸಿದ ಆ ಘೋರ ಕಷ್ಟ-ಸಂಕಟ-ನೋವುಗಳ-ಅನುಭವವನ್ನು ಆಲೋಚಿಸಿ ನೋಡು. ಸೈತಾನ ಅದೇಷ್ಟು ಯೇಸುಸ್ವಾಮಿಯವರನ್ನು ಅವಮಾನ ಪಡಿಸಿದ, ಆದರೆ ಅಂತ್ಯದಲ್ಲಿ ಅವನಿಗೆ ಎಂಥಹ ಹೀನಾಯ ಸೋಲಾಯಿತು ಎಂಬುದನ್ನು ನೆನೆಸಿನೋಡು. ನೀನೂ ಪಾಪದ ದಶೆಯಿಂದ ಅವಮಾನ ಪಡಬೇಕೇ? ಜೀವನದಲ್ಲಿ ಸೋಲನ್ನುಅನುಭವಿಸಬೇಕೇ? ಪಾಪವನ್ನು ಹಗುರವಾಗಿ ಪರಿಗಣಿಸದಿರಲು ದೇವರು ನಿನ್ನನ್ನು ಆಶೀರ್ವದಿಸಲಿ.

## IV. ಮುಂದಿನ ವಾರ : ಕ್ರಿಸ್ತನ ದೋಷಪರಿಹಾರಕ ಯಜ್ಞದ ಫಲಗಳು.